**ದಿನಾಂಕ:01-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಜಿ.ಆರ್.ಎಸ್. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಸಿ.ಎಂ.ಕೆ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು , ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ . ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ಪ್ರತಿವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನಾನು ಮರಾಠಿ ಭಾಷೆಯಲ್ಲಿ 2 ನೇ ತರಗತಿ ಓದಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ . ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಮಾಹಿತಿ ನೀಡಿದ್ದಾರೆ ಎಂದರೆ ಸಾಕ್ಷಿ ನಾನು ಮಾಹಿತಿ ನೀಡಿದ ಆಧಾರದ ಮೇಲೆ ವಕೀಲರು ಬರೆದು ಹಾಜರುಪಡಿಸಿದ್ದಾರೆ ಎನ್ನುತ್ತಾರೆ. ನಾನು ಮರಾಠಿಯಲ್ಲಿ ಓದಿದ್ದರಿಂದ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಇಂಗ್ಲೀಷ್ ನಲ್ಲಿ ಬರೆಯಾಗಿರುವುದರಿಂದ ಅದರಲ್ಲಿ ಬರೆದ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ನನಗೆ ಓದಿ ಹೇಳಿದ್ದಾರೆ ಎನ್ನುತ್ತಾರೆ. ನಾನು ಈ ದಿನ ಎಲ್ಲಾ ಪ್ರತಿವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಇತರ ಪ್ರತಿವಾದಿಗಳು ನನಗೆ ಮೊಕ್ತಿಯಾರನಾಮ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ಈ ದಾವೆಯನ್ನು ಯಾರು ಹೂಡಿದ್ದಾರೆ ಎಂದರೆ ಸಾಕ್ಷಿ ಸುರೇಶ ದೇವರಮನಿ ಮತ್ತು ರಾಮ ದೇವರಮನಿ ರವರು ಹೂಡಿದ್ದಾರೆ ಎನ್ನುತ್ತಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರೂ ಹಾಕಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಈ ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ವಾದಿಯರು

ಈ ದಾವೆಯನ್ನು ಹೊಲದ ಸಲುವಾಗಿ ಹೂಡಿದ್ದಾರೆ , ಅದರ ಸರ್ವೆ ನಂಬರ್ 40/30. ಸದರಿ ಸರ್ವೆ ನಂಬರಿನ ಪಹಣಿ ಪತ್ರಿಕೆಯನ್ನು ನಾನು ನೋಡಿದ್ದೇನೆ.

**2.** ನಿಪಿ-1 ಸರ್ವೆ ನಂಬರ್ 40/30 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಅದರಲ್ಲಿ 1 ಎಕರೆ 6 ಗುಂಟೆ ಇದೆ ಎಂದರೆ ಸರಿ. ಅದರಲ್ಲಿ ವಾದಿಯರ ಹೆಸರನ್ನು ಮಾಲೀಕ ಮತ್ತು ವ್ಯವಸಾಯಗಾರರೆಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ.1 2013-14 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ-2 ರಲ್ಲಿಯೂ ಸಹ ವಾದಿಯರ ಹೆಸರು ನಮೂದಾಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ವಾದಿಯರ ಹೆಸರು ನಮೂದಾಗಿದ್ದರೂ ದಾವಾ ಸ್ವತ್ತಿನ ಕಬ್ಜೆಯಲ್ಲಿ ನಾವೇ ಇದ್ದೇವೆ ಎನ್ನುತ್ತಾರೆ. ನಿಪಿ-2 ರಲ್ಲಿ ನಿಮ್ಮ ಕಬ್ಜೆಯ ಬಗ್ಗೆ ನಮೂದಿಸಲಾಗಿದೆಯೇ ಎಂದರೆ ಸಾಕ್ಷಿ ನಮೂದಾಗಿದೆ ಎನ್ನುತ್ತಾರೆ. ನಾನು ಕಬ್ಜೆಯಲ್ಲಿದ್ದೇನೆ ಎಂದು ನಮೂದಾಗದೆ ಇದ್ದರೂ ನಮೂದಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ರ 11 ನೇ ಕಲಂನಲ್ಲಿ 6,000/- ರೂಗಳಿಗೆ ಬೋಜ ಇದೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಕಬ್ಜೆ ನಮ್ಮ ಬಳಿ ಇದೆ ಎನ್ನುತ್ತಾರೆ.

**3.** ಈ ದಾವೆಯಲ್ಲಿ ಹಾಜರಾದ ನಂತರ ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರು ಹೇಳಿದ್ದಾರೆ ಎನ್ನುತ್ತಾರೆ. ವಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಾದಿಯರ ಮನೆತನದ ಮೂಲ ಪುರುಷ ಡೊಂಗರು ರಾಮ ದೇವರಮನಿ ಎಂದರೆ ಸರಿ. ಅವರಿಗೆ ಲಕ್ಷ್ಮಣ ದೇವರಮನಿ ಮಗ ಆಗಿದ್ದರು ಎಂದರೆ ಸರಿ. ಲಕ್ಷ್ಮಣನ ಹೆಂಡತಿ ಹೆಸರು ಲಕ್ಷ್ಮಿ ಎಂದರೆ ಸರಿ. ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ವಾದಿಯರಿಗೆ ದಾವಾ ಸ್ವತ್ತು ಅವರ ಅಜ್ಜ ಡೊಂಗರು ರಾಮ ದೇವರಮನಿ ರವರಿಂದ ಬಂದಿದೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿದ್ದರೂ ಸಹ ನಮ್ಮ ಅಜ್ಜ ಅಜ್ಜಿಯವರು ಕಬ್ಜೆಯಲ್ಲಿದ್ದರು ಎನ್ನುತ್ತಾರೆ. ನನ್ನ ಅಜ್ಜನ ಹೆಸರು ಗೋವಿಂದ ಕೆಮ್ಮಣ್ಣ ಮಹಾರ್ ಎಂದು. ಅಜ್ಜಿಯ ಹೆಸರು ನನಗೆ

ಗೊತ್ತಿಲ್ಲ. ನನ್ನ ಅಜ್ಜ ಅಜ್ಜಿ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ನನ್ನ ವಕೀಲರ ಮೂಲಕ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಾನು ನನ್ನ ಅಜ್ಜ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಆದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ವಾದಿಯರು ಒಟ್ಟಾಗಿ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಂತರ ಸಾಕ್ಷಿ ನಾವು ಉಳುಮೆ ಮಾಡುತ್ತೇವೆ ಎನ್ನುತ್ತಾರೆ. ನಾವು ಉಳುಮೆ ಮಾಡುತ್ತಿದ್ದೇ:ನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ದಾವಾ ಸ್ವತ್ತು 1 ಎಕರೆ 6 ಗುಂಟೆ ಇದೆ. ವಾದಿಯರು ಅಲಕರಣಿ ಪ್ಯಾಕ್ಟರಿಗೆ ಕಬ್ಬನ್ನು ಸಾಗಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರೇ ದಾವಾ ಸ್ವತ್ತಿನ ಕಂದಾಯವನ್ನು ಕಟ್ಟುತ್ತಿದ್ದಾರೆ ಸರಿಯಲ್ಲ, ಸಾಕ್ಷಿ ನಾನು ಕಂದಾಯ ಕಟ್ಟುತ್ತಿದ್ದೇನೆ ಎನ್ನುತ್ತಾರೆ. ಕಂದಾಯ ಪಾವತಿ ರಶೀದಿಗಳು ನನ್ನ ಬಳಿ ಇಲ್ಲ. ನಾನು ದಾವಾ ಸ್ವತ್ತಿನ ಕಂದಾಯವನ್ನು ಕಟ್ಟಿಲ್ಲ, ಆದರೆ ನನ್ನ ಬಳಿ ಯಾವುದೇ ಪಾವತಿ ರಶೀದಿಗಳು ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**